... ಅವರೊಂದಿಗೆ ಉತ್ತಮ ಬಾಂಧವ್ಯ ವನ್ನು ಹೊಂದಲಾಗುತ್ತಿದೆ.

# ಪಠ್ಯ ಚಟುವಟಿಕೆಗಳು

1. ತಾಲೂಕು ಮಟ್ಟದ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ನಡೆದ ತಾಲೂಕು ಮಟ್ಟದ ರಸಪ್ರಶ್ನೆ ಕಾರ್ಯಕ್ರಮದಲ್ಲಿ ನಮ್ಮ ಶಾಲೆಯ 10ನೇ ತರಗತಿಯ ವಿದ್ಯಾರ್ಥಿ ಕಿಶೋರ್ ಕುಮಾರ್ ಬಹುಮಾನ ಪಡೆದಿರುತ್ತಾನೆ.
2. ಪ್ರೌಢಶಾಲಾ ಪರೀಕ್ಷಾ ಮಂಡಳಿಯಿಂದ ನಡೆಸಿದಂತಹ ಡ್ರಾಯಿಂಗ್ ಗ್ರೇಡ್ ಪರೀಕ್ಷೆಯಲ್ಲಿ ನಮ್ಮ ಪ್ರೌಢಶಾಲೆಯ 31 ವಿದ್ಯಾರ್ಥಿಗಳು ಭಾಗವಹಿಸಿದ್ದು ಶೇಕಡ ನೂರರಷ್ಟು ಫಲಿತಾಂಶದ ನಿರೀಕ್ಷೆಯಲ್ಲಿದ್ದೇವೆ.
3. ಪತ್ರಿಕಾ ದಿನಾಚರಣೆಯ ಪ್ರಯುಕ್ತ ನಡೆದ ತಾಲೂಕು ಮಟ್ಟದ ಚಿತ್ರಕಲಾ ಸ್ಪರ್ಧೆಯಲ್ಲಿ ನಮ್ಮ ಶಾಲೆಯ 10 ಮಕ್ಕಳು ಭಾಗವಹಿಸಿ ಉತ್ತಮ ಪಾರಿತೋಷಕಗಳನ್ನು ಪಡೆದು ಶಾಲೆಯ ಕೀರ್ತಿಯನ್ನು ಹೆಚ್ಚಿಸಿರುತ್ತಾರೆ.
4. ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯಲ್ಲಿ ನಮ್ಮ ಶಾಲೆಯ ಹತ್ತನೇ ತರಗತಿಯ ಆರು ಜನ ಮಕ್ಕಳು ಭಾಗವಹಿಸಿ ಬಹುಮಾನಗಳನ್ನ ಪಡೆದಿದ್ದು ಸಂತಸದ ವಿಚಾರ.
5. ಭಾರತ ಸಂಸ್ಕೃತಿ ಪ್ರತಿಷ್ಠಾನ ಬೆಂಗಳೂರು, ಇವರ ವತಿಯಿಂದ ನಡೆದ ಎಳೆಯರ ರಾಮಾಯಣ ಸ್ಪರ್ಧೆಯಲ್ಲಿ ನಮ್ಮ ಶಾಲೆಯ 65 ಮಕ್ಕಳು ಭಾಗವಹಿಸಿದ್ದುರು. ಅದರಲ್ಲಿ 7ನೇ ತರಗತಿಯ ಬಿಂದುಶ್ರೀ ಮತ್ತು ಭಾನುಪ್ರಿಯ 5ನೇ ತರಗತಿಯ ತನುಶ್ರೀ ಮತ್ತು ಕುಶಾಲ್.ಆರ್ ರವರು ಚಿನ್ನದ ಪದಕವನ್ನು ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ.
6. ಗ್ರಂಥಾಲಯ ದಿನಾಚರಣೆ ಪ್ರಯುಕ್ತ ನಡೆದ ತಾಲೂಕು ಮಟ್ಟದ ಸ್ಪರ್ಧೆಗಳಲ್ಲಿ ಪೂಜಿತ ಎಸ್ ನಾಗಶ್ರೀ, ಕಿಶೋರ್ ಕುಮಾರ್, ಶಫಕ್ ಜಹಾನ್, ಜಗನ್ ಕೆ, ವಿದ್ಯಾರ್ಥಿಗಳು ಭಾಗವಹಿಸಿ ಬಹುಮಾನ ಪಡೆದಿರುತ್ತಾರೆ.
7. ಪರಿಸರ ಸಂರಕ್ಷಣೆ ದಿನಾಚರಣೆಯ ಪ್ರಯುಕ್ತ ನಡೆದ ಪ್ರಬಂಧ ಸ್ಪರ್ಧೆಯಲ್ಲಿ ನಮ್ಮ ಶಾಲೆಯಿಂದ ಕಾವ್ಯ, ರುಕ್ಸಾನ, ಶಫಕ್ ಜಹಾನ್, ಸೈಯದ್ ಮುಕ್ತಿಯಾರ್, ಪೂಜಿತ ಎಸ್ ನಾಗಶ್ರೀ ಮತ್ತು ಮಹಮ್ಮದ್ ರಜಾಕ್ ಎಂಬ ವಿದ್ಯಾರ್ಥಿಗಳು ಬಹುಮಾನವನ್ನು ಪಡೆದಿರುತ್ತಾರೆ.
8. ಚಿಕ್ಕಬಳ್ಳಾಪುರದ BGS ಅಗಲಗುರ್ಕಿ ಶಾಲೆಯಲ್ಲಿ ನಡೆದ ಅಂತರ್ ಜಿಲ್ಲಾ ಮಟ್ಟದ ಪ್ರತಿಭಾನ್ವೇಷಣೆ ಕಾರ್ಯಕ್ರಮದಲ್ಲಿ ನಮ್ಮ ಶಾಲೆಯ ಕಿಶೋರ್ ಕುಮಾರ್ ಮತ್ತು ಕಿರಣ್ ಕುಮಾರ್ ಎಂಬ ಮಕ್ಕಳು ಪ್ರಶಸ್ತಿ ಪಡೆದು ಶಾಲೆಯ ಕೀರ್ತಿ ಹೆಚ್ಚಿಸಿರುತ್ತಾರೆ.

Scanned with OKEN Scanner

9. ರಾಜ್ಯಮಟ್ಟದ ವಿವೇಕ ವಿದ್ಯಾರ್ಥಿ ಪರೀಕ್ಷೆ ನಡೆಸಲಾಗಿ ಎಲ್ಲಾ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿ 15 ಮಕ್ಕಳು ಉತ್ತಮ ಪಾರಿತೋಷಕಗಳನ್ನು ಪಡೆದು ಶಾಲೆಗೆ ಕೀರ್ತಿ ತಂದಿರುತ್ತಾರೆ.

10. ರಾಜ್ಯಮಟ್ಟದ **Brain-o-thon** ಪರೀಕ್ಷೆಯಲ್ಲಿ ನಮ್ಮ ಶಾಲೆಯ 163 ಮಕ್ಕಳು ಭಾಗವಹಿಸಿ 10 ಮಕ್ಕಳಾದ

| | |
|---|---|
| **ಬುಶ್ರ (1std)** | **ಅಲ್ರೈನ ($2^{nd}$ std)** |
| **ಚಾರುಹಾಸ ಸಾಯಿ ($3^{rd}$ std)** | **ಬಿಬಿ ಫಾತಿಮಾ ($4^{th}$ std)** |
| **ಸಾದಿಯ ಕೌಸರ್ ($5^{th}$ std)** | **ಮಹಮ್ಮದ್ ಜಮೀರ್ ($6^{th}$ std)** |
| **ಶಾಫಿಯ ಸುಲ್ತಾನ ($7^{th}$ std)** | **ಮಹಮ್ಮದ್ ರಜಾಕ್ ($8^{th}$ std)** |
| **ಶಫಕ್ ಜಹಾನ್ ($9^{th}$ std)** | **ಜಗನ್ ಕೆ ($10^{th}$ std)** |

ಈ ಮೇಲ್ಕಂಡ ವಿದ್ಯಾರ್ಥಿಗಳು ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುವುದು ನಮ್ಮೆಲ್ಲರಿಗೂ ಹೆಚ್ಚಿನ ಸಂತೋಷವನ್ನು ಉಂಟು ಮಾಡಿದೆ

# ಶಿಕ್ಷಕರಿಗಾಗಿ ನಡೆದ ಚಟುವಟಿಕೆಗಳು

1. ಇದೇ 2025-26 ನೇ ಸಾಲಿನಲ್ಲಿ ನಡೆದ ರಾಜ್ಯಮಟ್ಟದ Brain-o-thon ಪರೀಕ್ಷೆಯಲ್ಲಿ ನಮ್ಮ ಶಾಲೆಯ ಡಿ.ಎ. ನಂದಗೋಪಾಲ್ ರವರು ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನವನ್ನು ಪಡೆದು ಶಾಲೆಗೆ ಗೌರವವನ್ನು ತಂದಿರುತ್ತಾರೆ.
2. 29.11.2025ರಂದು ಚಿಕ್ಕಬಳ್ಳಾಪುರದಲ್ಲಿ ನಡೆದ ಸ್ಕೌಟ್ಸ್ ಮತ್ತು ಗೈಡ್ಸ್ ನ ದಳನಾಯಕ ವಿಭಾಗದಲ್ಲಿ ಕು|| ಉಷಾ ಬಿ ರವರು ಜಿಲ್ಲಾಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.
3. ಇದೇ 25-26ನೇ ಸಾಲಿನ ತಾಲ್ಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಸಮಾರಂಭದಲ್ಲಿ ಅನುದಾನಿತ ಪ್ರಾಥಮಿಕ ಶಾಲೆಗಳ ವಿಭಾಗದಲ್ಲಿ ನಮ್ಮ ಶಾಲೆಯ ಶ್ರೀಯುತ ಎಂ.ವೆಂಕಟರೆಡ್ಡಿ ರವರು ತಾಲ್ಲೂಕು ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ಪಡೆದು ಶಾಲೆಗೆ ಗೌರವವನ್ನು ತಂದಿರುತ್ತಾರೆ.
4. ದಿನಾಂಕ17.04.2025 ರಿಂದ ಪ್ರೌಢಶಾಲಾ ವಿಭಾಗದಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಶ್ರೀಮತಿ ಗಗನ ರವರು ನಮ್ಮ ಸಂಸ್ಥೆಯಲ್ಲಿ ಅನುದಾನಕ್ಕೆ ಒಳಪಟ್ಟಿರುತ್ತಾರೆ. ಇದಕ್ಕಾಗಿ ಘನ ಸರ್ಕಾರಕ್ಕೆ ನಮ್ಮ ಸಂಸ್ಥೆಯು ಆಭಾರಿಯಾಗಿದೆ.
5. ದಿನಾಂಕ 8-12-2025 ರಂದು ನಮ್ಮ ಶಾಲೆಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀಯುತ ಕೋ.ಲ. ನರಸಿಂಹಮೂರ್ತಿಗಳ 80ನೇ ವರ್ಷದ ಜನ್ಮ ದಿನಾಚರಣೆಯನ್ನು ವೈಭವತವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ತಾಲೂಕು ಮಟ್ಟದಲ್ಲಿ ಪ್ರೌಢಶಾಲಾ ವಿಭಾಗಕ್ಕೆ ದೇಶಭಕ್ತಿ ಗೀತ ಗಾಯನ ಸ್ಪರ್ಧೆಯನ್ನು ಏರ್ಪಡಿಸಿ ವಿಜೇತರಾದ ಮಕ್ಕಳಿಗೆ ನಗದು ಬಹುಮಾನ ಹಾಗೂ ಪಾರಿತೋಷಕಗಳನ್ನು ನೀಡಿ ಗೌರವಿಸಲಾಯಿತು.
6. ಪ್ರತಿವರ್ಷದಂತೆ ಈ ವರ್ಷವೂ ಸಹ ಶಾಲಾ ವಾರ್ಷಿಕೋತ್ಸವದ ಪ್ರಯುಕ್ತ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಹಲವಾರು ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳನ್ನು ಹಮ್ಮಿಕೊಂಡು ವಿಜೇತ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ಸೂಕ್ತ ಬಹುಮಾನಗಳನ್ನು ನೀಡಿ ಗೌರವಿಸಲಾಗಿದೆ.

Scanned with OKEN Scanner